**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.</u>**

**<u>ಸಿಸಿ ನಂ.75/2018</u>**

**<u>ಚಾಸಾ-15/ಪಿಡಬ್ಲೂ -2</u>**

| | |
|---|---|
| **ಹೆಸರು** | ಶಿವಾನಂದ |
| **ತಂದೆ ಹೆಸರು** | ಸಂಗಪ್ಪ ದೊಡ್ಡಮನಿ |
| **ವಯಸ್ಸು** | 66 ವರ್ಷಗಳು |
| **ಉದ್ಯೋಗ** | ನಿವೃತ್ತ ಪಿ.ಎಸ್.ಐ |
| **ವಾಸ ಸ್ಥಳ** | ವಿಜಯಪೂರ |

**<u>ಸಾಕ್ಷಿ ವಿಚಾರಣೆ ದಂಡ ಪ್ರಕ್ರಿಯ ಸಂಹಿತೆ ಕಲಂ 299 ಅಡಿಯಲ್ಲಿ</u>**
**<u>ಸಾಕ್ಷಿಯನ್ನ ದಿನಾಂಕ 21-07-2026ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.</u>**

ದಿನಾಂಕ 08.06.2016 ರಿಂದ ಮೇ 2017 ರವರೆಗೆ ಪಿಎಸ್ಐ ಎಂದು ನೇಲೋಗಿ ಠಾಣೆಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 22.12.2016 ರಂದು ಮಧ್ಯಾಹ್ನ 1-30 ಗಂಟೆಗೆ ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಠಾಣೆ ಗುನ್ನೆ ನಂ 242/16 ಎಂದು ಐಪಿಸಿ ಕಲಂ 364, 307, 504 ಸಹ ಕಲಂ 34 ಅಡಿಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿರುತ್ತದೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ನೊಂದ ವ್ಯಕ್ತಿಯಾದ ಸಿದ್ದಪ್ಪ ರವರು ಕಚೇರಿಗೆ ಬಂದಿರುತ್ತಾರೆ. ನಂತರ ಅದೇ ದಿನ ಚಾಸಾ-6, 7, 8, 9, 10 ರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-6 ರವರು ನೊಂದ ವ್ಯಕ್ತಿಯಾಗಿದ್ದು ಅವರ ಕಾಲಿಗೆ ಈ ಘಟನೆಯಲ್ಲಿ ಗಾಯವಾಗಿದ್ದರಿಂದ ಚಾಸಾ-14 ರವರ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ದಿನಾಂಕ 23.12.2016 ರಂದು ಚಾಸಾ-2 ಮತ್ತು 3 ರ ಸಮಕ್ಷಮ ಗುನ್ನೆ ಜಾಗೆಯ ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ದಿನಾಂಕ 23.12.2016 ರಂದು ಚಾಸಾ-6 ರವರು ತೋರಿಸಿದ ಗುನ್ನೆ ಸ್ಥಳವಾದ ಜೇರಟಗಿ ರಸ್ತೆ ಬೆಲೂರ ಸೀಮಾಂತರ ಭಾಗಣ್ಣ ತಳವಾರ ಇವರ ಹೊಲದ ಹತ್ತಿರ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿ 3 ಮಚ್ಚುಗಳನ್ನು ವಶಪಡಿಸಿಕೊಂಡಿರುತ್ತೇನೆ. ಜಪ್ತಿ ಪಂಚನಾಮೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರು ತಲೆ ಮರಿಸಿಕೊಂಡಿರುವುದರಿಂದ ಆರೋಪಿತರ ಪತ್ತೆ ಕುರಿತು ಚಾಸಾ-11 ರಿಂದ 13 ರವರನ್ನು ನೇಮಕ ಮಾಡಿಕೊಂಡಿದ್ದು ಚಾಸಾ-11 ರಿಂದ 13 ರವರಿಂದ ಆರೋಪಿತರ ಪತ್ತೆ ಕುರಿತು ವರದಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಗಳನ್ನು ನಿಪಿ-5 ರಿಂದ 7 ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ಚಾಸಾ-6 ರವರ ಗಾಯದ ಪತ್ರವನ್ನು ಚಾಸಾ-16 ರವರಿಂದ ಪಡೆದುಕೊಂಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿತರ ವಿರುದ್ದ ಆರೋಪ ಸಾಭೀತಾಗಿರುವುದರಿಂದ ಪಿಎಸ್ಐ ಸಿದ್ರಾಮ ಬೆಳ್ಳೂರಗಿ ರವರು ಅಂತಿಮ ವ ರದಿ ಸಲ್ಲಿಸಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**

**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.</u>**

**<u>ಸಿಸಿ ನಂ.75/2018</u>**

**<u>ಪಿಡಬ್ಲೂ -3</u>**

| | |
|---|---|
| **ಹೆಸರು** | ಬಸವರಾಜ |
| **ತಂದೆ ಹೆಸರು** | ಮಹಾಂತಪ್ಪ |
| **ವಯಸ್ಸು** | 43 ವರ್ಷಗಳು |
| **ಉದ್ಯೋಗ** | ಪೊಲೀಸ ಪೇದೆ |
| **ವಾಸ ಸ್ಥಳ** | ನೆಲೋಗಿ ಪೊಲೀಸ ಠಾಣೆ |

**<u>ಸಾಕ್ಷಿ ವಿಚಾರಣೆ ದಂಡ ಪ್ರಕ್ರಿಯ ಸಂಹಿತೆ ಕಲಂ 299 ಅಡಿಯಲ್ಲಿ</u>**
**<u>ಸಾಕ್ಷಿ ಯನ್ನ ದಿನಾಂಕ 21-07-2026 ರಂದು ಸಾಕ್ಷಿ ಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.</u>**

ನಾನು ನೇಲೋಗಿ ಠಾಣೆಯಲ್ಲಿ 2020 ರಿಂದ ಪ್ರಸ್ತುತವಾಗಿ ಪೇದೆಯಾಗಿ ನೆಲೋಗಿ ಪೊಲೀಸ ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸದರಿ ಪ್ರಕರಣವು ಗುನ್ನೆ ನಂ. 242/16 ರ ಬೇಪರ್ಡೆ ಅಂತಿಮ ವರದಿಯಾಗಿದ್ದು ಸದರಿ ಪ್ರಕರಣದಲ್ಲಿ ದಿನಾಂಕ 24.4.2022 ರಂದು 2ನೇ ಆರೋಪಿತನ ಹೆಸರು ಸಂತೋಷ ತಂದೆ ಬಸವರಾಜ ಹೂಗಾರ ಸಾಃ ಯಾತನೂರ ಮಾನ್ಯ ನ್ಯಾಯಾಲಯದಿಂದ ಉದ್ಘೋಷಣ ವಾರಂಟನ್ನು ಸ್ವಿಕರಿಸಿ ಅದೇ ದಿವಸ ಯಾತನೂರ ಗ್ರಾಮಕ್ಕೆ ಹೋಗಿ ಪಂಚರಾದ ರವಿ ತಂದೆ ಸಿದ್ದಪ್ಪ ಹೂಗಾರ ಮತ್ತು ಪೀರಪ್ಪ ತಂದೆ ಬಸಪ್ಪ ಯಾತನೂರ ಇವರನ್ನು ಪಂಚರಾಗಿ ನೇಮಕ ಮಾಡಿಕೊಂಡು ಪ್ರಕರಣದ ಬಗ್ಗೆ ಮಾಹಿತಿ ಹೇಳಿ ಉದ್ಘೋಷಣ ವಾರಂಟನ್ನು ಯಾತನೂರ ಗ್ರಾಮದ ಹನುಮಾನ ದೇವಸಾಥನಕ್ಕೆ ಅಂಟಿಸಿ ಒಂದು ಪ್ರತಿಯನ್ನು ಯಾತನೂರ ಗ್ರಾಮದ ಬಸ ನಿಲ್ದಾಣಕ್ಕೆ ಅಂಟಿಸಿ ಊರಲ್ಲಿ ಡಂಗೂರ ಸಾರಿಸಿರುತ್ತೇನೆ. ಅದೇ ದಿವಸ ಬೆಳಿಗ್ಗೆ 9-00 ರಿಂದ 10-00 ಗಂಟೆಗೆಯವರೆಗೆ ಪಂಚನಾಮೆ ಮಾಡಿ ಪಂಚನಾಮೆಯಲ್ಲಿ ಮತ್ತು ಉದೋಷಣಾ ವರಂಟನಲ್ಲಿ ಪಂಚರ ಸರಿಯನ್ನು ಪಡೆದುಕೊಂಡಿರುತ್ತೇನೆ. ಉದ್ಘೋಷಣ ವಾರಂಟನ್ನು ನಿಪಿ-9 ಎಂದು , ಪಂಚನಾಮೆ ವರದಿಯನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಅದೇ ದಿನಾಂಕದಂದು ಈ ಪ್ರಕರಣದಲ್ಲಿ 3ನೇ ಆರೋಪಿತನ ಹೆಸರು ಕಲ್ಲಪ್ಪ ತಂದ ಬೀಮಪ್ಪ ಮಾದರ ಸಾ: ಓತಿಹಾಳ ತಾಃ ಸಿಂದಗಿ ಇಲ್ಲಿ ಭೇಟಿ ನೀಡಿ ಪಂಚರಾದ ನೀಲಕಂಠ ತಂದೆ ಗುರುಲಿಂಗಪ್ಪ ಬಿರಾದಾರ , ಏಕಾನಥ ತಂದೆ ಸಿದ್ದಪ್ಪ ಇವರನ್ನು ಪಂಚರನ್ನಾಗಿ ನೇಮಿಸಿ ಸದರಿ ಪಂಚರು ಒಪ್ಪಿ ಕೊಂಡ ಮೇರೆಗೆ ಒಂದು ಉದ್ಘೋಷಣ ವಾಂಟನ ಒಂದು ಪ್ರತಿಯನ್ನು ಆರೋಪಿತನ ಮನೆಗೆ ಅಂಟಿಸಿದ್ದು , ಒಂದು ಪ್ರತಿಯನ್ನು ಗ್ರಾಮದ ಜಟಿಂಗದೇವರಾಯನ ದೇವಸ್ಥಾನಕ್ಕೆ ಅಂಟಿಸಿರುತ್ತೇನೆ. ಪಂಚನಾಮೆಯನ್ನು 2-00 ರಿಂದ 3-00 ಗಂಟೆಯವರೆಗೆ ಮಾಡಿ ಸದರಿ

ಪಂಚನಾಮೆಯ ಮೇಲೆ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಉದ್ಘೋಷಣ ವಾರಂಟನ್ನು ನಿಪಿ-11 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ಅದೇ ದಿನಾಂಕದಂದು ಈ ಪ್ರಕರಣದಲ್ಲಿ 1ನೇ ಆರೋಪಿತನ ಹೆಸರು ಶ್ರೀಶೈಲ ತಂದೆ ಶ್ರೀಮಂತ ಹರಿಜನ ಸಾಃ ಪತ್ತೆಪೂರ ಇಲ್ಲಿ ಭೇಟಿ ನೀಡಿ ಪಂಚರಾದ ಸಿದ್ದಪ್ಪ ತಂದೆ ತಿಪ್ಪಣ್ಣ , ಬಸವರಾಜ ತಂದೆ ಮಹಾದೇವಪ್ಪ ಇವರನ್ನು ಪಂಚರನ್ನಾಗಿ ನೇಮಿಸಿ ಸದರಿ ಪಂಚರು ಒಪ್ಪಿ ಕೊಂಡ ಮೇರೆಗೆ ಒಂದು ಉದ್ಘೋಷಣ ವಾಂಟನ ಒಂದು ಪ್ರತಿಯನ್ನು ಅಂಬೇಡ್ಕರ ಭವಕ್ಕೆ ಅಂಟಿಸಿದ್ದು, ಒಂದು ಪ್ರತಿಯನ್ನು ಗ್ರಾಮದ ಮುಖ್ಯ ಅಗಸಿಗೆ ಅಂಟಿಸಿರುತ್ತೇನೆ. ಪಂಚನಾಮೆಯನ್ನು ಸಂಜೆ 6-00 ರಿಂದ 8-00 ಗಂಟೆಯವರೆಗೆ ಮಾಡಿ ಸದರಿ ಪಂಚನಾಮೆಯ ಮೇಲೆ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಉದ್ಘೋಷಣ ವಾರಂಟನ್ನು ನಿಪಿ-13 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ-14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**

**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**
**ಸಿಸಿ ನಂ.75/2018**

**ಪಿಡಬ್ಲ್ಯೂ -4**

| | |
|---|---|
| **ಹೆಸರು** | ಬಸವರಾಜ |
| **ತಂದೆ ಹೆಸರು** | ಗುರುಲಿಂಗಪ್ಪ |
| **ವಯಸ್ಸು** | 46 ವರ್ಷಗಳು |
| **ಉದ್ಯೋಗ** | ಪೊಲೀಸ ಮುಖ್ಯ ಪೇದೆ |
| **ವಾಸ ಸ್ಥಳ** | ನೆಲೋಗಿ ಪೊಲೀಸ ಠಾಣೆ |

**ಸಾಕ್ಷಿ ವಿಚಾರಣೆ ದಂಡ ಪ್ರಕ್ರಿಯ ಸಂಹಿತೆ ಕಲಂ 299 ಅಡಿಯಲ್ಲಿ**
**ಸಾಕ್ಷಿ ಯನ್ನ ದಿನಾಂಕ 21-07-2026 ರಂದು ಸಾಕ್ಷಿ ಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

ನಾನು ನೇಲೋಗಿ ಠಾಣೆಯಲ್ಲಿ 2020 ರಿಂದ ಪ್ರಸ್ತುತವಾಗಿ ಮುಖ್ಯ ಪೇದೆಯಾಗಿ ನೆಲೋಗಿ ಪೊಲೀಸ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.08.2024 ರಂದು 2ನೇ ಆರೋಪಿತನಿಗೆ ಸಂಬಂಧಪಟ್ಟಂತೆ ಜೇವರ್ಗಿಯ ತಹಶೀಲ್ದಾರ ಕಚೇರಿಯಲ್ಲಿ ಆಸ್ತಿ ವಿವರ ಕೇಳಿ ಪತ್ರ ಬರೆದಿದ್ದು , ಜೇವರ್ಗಿ ತಹಶೀಲ್ದಾರ ಇವರು 2ನೇ ಆರೋಪಿತನ ಹೆಸರಿನಲ್ಲಿ ಜೇವರ್ಗಿ ತಾಲೂಕಿನಲ್ಲಿ ಯಾವುದೇ ಆಸ್ತಿ ಇಲ್ಲವೆಂದು ಬರೆದು ಕೊಟ್ಟಿರುತ್ತಾರೆ. ಸದರಿ ವರದಿಯನ್ನು ನಿಪಿ-15 ಎಂದು ಗುರುತಿಸಲಾಯಿತು.

ದಿನಾಂಕ 12.08.2024 ರಂದು 2ನೇ ಆರೋಪಿತನ ಹೆಸರಿನಲ್ಲಿ ಜೇರಟಗಿ ಮತ್ತು ಯಾತನೂರು ಗ್ರಾಮದಲ್ಲಿ ಆಸ್ತಿಗಳು ಇರುವ ಬಗ್ಗೆ ಪತ್ರ ಬರೆದಿದ್ದು ಸದರಿ ಪಿಡಿಓ ರವರು ವರದಿ ನೀಡಿದ್ದು ಸದರಿ ಪಿಡಿಓ ವರದಿಯನ್ನು ನಿಪಿ-16 ಎಂದು ಗುರುತಿಸಲಾಯಿತು.

ಅದೇ ದಿವಸ ಪಿಡಿಓ ಗ್ರಾಮ ಪಂಚಾಯತಿ ಬಂದಾಳ ಇವರಿಗೆ 3ನೇ ಆರೋಪಿತನ ಹೆಸರಿನಲ್ಲಿ ದಿನಾಂಕ 12.08.2024 ರಂದು 3ನೇ ಆರೋಪಿತನ ಹೆಸರಿನಲ್ಲಿ ಬಂದಾಳ ಗ್ರಾಮದಲ್ಲಿ ಆಸ್ತಿಗಳು ಇರುವ ಬಗ್ಗೆ ಪತ್ರ ಬರೆದಿದ್ದು ಸದರಿ ಪಿಡಿಓ ರವರು ವರದಿ ನೀಡಿದ್ದು ಸದರಿ ಪಿಡಿಓ ವರದಿಯನ್ನು ನಿಪಿ-17 ಎಂದು ಗುರುತಿಸಲಾಯಿತು.

ದಿನಾಂಕ 26.11.2024 ರಂದು 3ನೇ ಆರೋಪಿತನ ಆಸ್ತಿಯ ವಿವರ ಕೇಳಿ ಸಂಬಂಧಪಟ್ಟಂತೆ ಸಿಂದಗಿ ತಹಶೀಲ್ದಾರ ಕಚೇರಿಗೆ ಪತ್ರ ಬರೆದಿದ್ದು, ಸಿಂದಗಿಯ ತಾಲೂಕಿನಲ್ಲಿ 3ನೇ ಆರೋಪಿತನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲವೆಂದು ವರದಿ ನೀಡಿರುತ್ತಾರ. ಸದರಿ ವರದಿಯನ್ನು ನಿಪಿ-18 ಎಂದು ಗುರುತಿಸಲಾಯಿತು.

ದಿನಾಂಕ 05.02.2025 ರಂದು ಪತ್ತೆಪೂರ ಗ್ರಾಮ ಪಂಚಾಯತ ಹೆಸರಿನಲ್ಲಿ 1ನೇ ಆರೋಪಿತನ ಹೆಸರಿನಲ್ಲಿ ತಾಳಿಕೋಟಿ ತಾಲೂಕಿನಲ್ಲಿ ಮತ್ತು ಪತ್ತೆ ಪೂರ ಗ್ರಾಮ ಪಂಚಾಯತಿಯಲ್ಲಿ ತಾಳಿಕೋಟಿಯ ತಹಶೀಲ್ದಾರ ಮತ್ತು ಪತ್ತೆಪೂರದ ಗ್ರಾಮ ಪಂಚಾಯತಿಯ ಪಿಡಿಓ ರವರಿಗೆ ಆಸ್ತಿಗಳು ಇರುವ ಬಗ್ಗೆ ಪತ್ರ ಬರೆದಿದ್ದು ಪತ್ತೆಪೂರ ಗ್ರಾಮದಲ್ಲಿ ಮತ್ತು ತಾಳಿಕೋಟಿ ತಾಲೂಕಿನಲ್ಲಿ 1ನೇ ಆರೋಪಿತನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲವೆಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನಿಪಿ-19 ಎಂದು ಗುರುತಿಸಲಾಯಿತು. ಪಿಡಿಓ ಪತ್ತೆಪೂರ ರವರು ನೀಡಿದ ವರದಿಯನ್ನು ನಿಪಿ-20 ಎಂದು ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
**ಜೇವರ್ಗಿ**